‘ನಾಗರಹಾವು’ ವಿಷ್ಣು ಜನಪ್ರಿಯತೆಯನ್ನು ಬಳಸಿಕೊಂಡಿರುವ ಒಂದು ಕೆಟ್ಟ ವ್ಯಾಪಾರೀ ತಂತ್ರ ಹಾಗೂ ಪುಟ್ಟಣ್ಣನವರು ಸೃಷ್ಟಿಸಿದ್ದ ರೂಪಕವನ್ನು ವಿರೂಪಗೊಳಿಸುವ ಪ್ರಯತ್ನ.

# ಪುನರ್ ಸೃಷ್ಟಿ ಎನ್ನುವ ಅಣಕ



‘ವಿಷ್ಣುವರ್ಧನ್ ತೀರಿಹೋಗಿದ್ದಾರೆ ಎನ್ನುವುದನ್ನು ನಂಬಲು ನನ್ನಿಂದ ಸಾಧ್ಯವಾಗುತ್ತಿಲ್ಲ. ಅವರು ಈಗಲೂ ನಮ್ಮ ನಡುವೆ ಇದ್ದಾರೆ ಎಂದೇ ನನಗನ್ನಿಸುತ್ತದೆ. ಈ ಅನುಭವ ಬೇರೆ ಯಾರೊಬ್ಬರ ವಿಷಯದಲ್ಲೂ ನನಗಾಗಿಲ್ಲ’. ಹಿರಿಯ ನಟಿ ಲಕ್ಷ್ಮಿ ಅವರು ಕಿರುತೆರೆಯ ರಿಯಾಲಿಟಿ ಶೋ ಒಂದರಲ್ಲಿ ಹೇಳಿದ ಮಾತುಗಳಿವು. ಈ ಮಾತುಗಳ ಜೊತೆಗೆ, ‘ನಾಗರಹಾವು’ ಚಿತ್ರದ ನಿರ್ದೇಶಕ ಕೋಡಿ ರಾಮಕೃಷ್ಣ ಅವರ ಮಾತನ್ನು ನೆನಪಿಸಿಕೊಳ್ಳಿ – ‘ವಿಷ್ಣು ಅವರನ್ನು ಪುನರ್ ಸೃಷ್ಟಿಸಿದ್ದೇವೆ’.

‘ನಾಗರಹಾವು’ ಚಿತ್ರದಲ್ಲಿ ಗ್ರಾಫಿಕ್ಸ್ ತಂತ್ರಜ್ಞಾನದ ಮೂಲಕ ವಿಷ್ಣುವರ್ಧನ್ ಅವರನ್ನು ಸೃಷ್ಟಿಸಿರುವುದು ಸದ್ಯಕ್ಕೆ ಗಾಂಧಿನಗರದಲ್ಲಿ ಚಾಲ್ತಿಯಲ್ಲಿರುವ ಸುದ್ದಿಗಳಲ್ಲೊಂದು. ಈ ಚಿತ್ರದ ಬಿಡುಗಡೆಯ ಸಂದರ್ಭದಲ್ಲಿ ‘ವಿಷ್ಣು ಪುನರ್ ಸೃಷ್ಟಿ’ ಕುರಿತು ನಿರ್ದೇಶಕರು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಆದರೆ, ಒಬ್ಬ ಕಲಾವಿದನಿಗೆ ಸಾವೆನ್ನುವುದು ಉಂಟೆ? ಅದರಲ್ಲೂ ವಿಷ್ಣುವರ್ಧನ್ ಅವರಂಥ ಜನಪ್ರಿಯ ಕಲಾವಿದನಿಗೆ ಸಾವುಂಟೆ? ಹೌದು ಎನ್ನುವುದಾದರೆ, ಸಾವಿರಾರು ಜನರ ಮನಸ್ಸುಗಳಲ್ಲಿ ಜೀವಂತವಾಗಿರುವ ವಿಷ್ಣು ಬಿಂಬಗಳ ಗತಿಯೇನು?

ನಮ್ಮ ನೆಚ್ಚಿನ ಹೀರೋಗಳನ್ನು ಯಾವುದೋ ಒಂದು ರೂಪದಲ್ಲಿ ಮರುಕಳಿಸಿಕೊಳ್ಳುವುದು ಹೊಸತೇನೂ ಅಲ್ಲ. ಹಾಡಿನ ಮೂಲಕವೋ ಕಥನಗಳ ರೂಪದಲ್ಲೋ ಕುಂಚದ ರೇಖೆಗಳಲ್ಲೋ ಇಷ್ಟಪಾತ್ರರನ್ನು ಚಿತ್ರಿಸುವ ಪ್ರಯತ್ನಗಳು ನಡೆಯುತ್ತಿರುತ್ತವೆ. ಈಗ ತಂತ್ರಜ್ಞಾನದ ಅಬ್ಬರದ ಸಮಯದಲ್ಲಿ ವಿಷ್ಣು ಗ್ರಾಫಿಕ್ಸ್ ಮೂಲಕ ಮರುಕಳಿಸಿದ್ದಾರಷ್ಟೇ! ಇಂಥ ಮರುಕಳಿಕೆಗಳನ್ನು ಪುನರ್ ಸೃಷ್ಟಿಯೆಂದು ಭಾವಿಸುವುದು ಅಥವಾ ಬೀಗುವುದರಲ್ಲಿ ಅರ್ಥವೇನೂ ಇಲ್ಲ. ಹಾಗಾಗಿ, ಕೋಡಿ ರಾಮಕೃಷ್ಣರ ಪುನರ್ ಸೃಷ್ಟಿಯ ಹೇಳಿಕೆಯ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳಬೇಕಿಲ್ಲ. ಆದರೆ, ಅವರು ತಮ್ಮ ಗ್ರಾಫಿಕ್ಸ್ ಸೃಷ್ಟಿಯ ಮೂಲಕ ಬಿಂಬಿಸ ಬಯಸಿರುವ ವ್ಯಕ್ತಿತ್ವದ ಬಗ್ಗೆ ಚಿತ್ರರಸಿಕರು ಗಂಭೀರವಾಗಿ ಯೋಚಿಸಬೇಕಾಗಿದೆ.

‘ನಾಗರಹಾವು’ ಚಿತ್ರದ ಕಥೆ ಮರುಜನ್ಮಕ್ಕೆ ಸಂಬಂಧಿಸಿದ್ದು, ಸೇಡಿಗೆ ಸಂಬಂಧಿಸಿದ್ದು. ಇಂಥದೊಂದು ಚರ್ವಿತ ಚರ್ವಣ ಹಾಗೂ ಮೌಢ್ಯದ ಪಾತ್ರದ ಮೂಲಕ ವಿಷ್ಣುವರ್ಧನ್ ಅವರನ್ನು ಅಭಿಮಾನಿಗಳು ನೆನಪಿಸಿಕೊಳ್ಳಬೇಕೆ? ಜೊತೆಗೆ, ಈ ನಾಗದೇವರು ‘ಸಿಂಹ, ಸಾಹಸಸಿಂಹ’ ಎಂದು ಅಬ್ಬರಿಸುತ್ತದೆ. ಈ ಕಲ್ಪನೆಯನ್ನು ನೋಡಿ ಯಾರಾದರೂ ಮೂಕವಿಸ್ಮಿತರಾಗಬೇಕು.

‘ನಾಗರಹಾವು’ ವಿಷ್ಣು ಅವರ ಜನಪ್ರಿಯತೆಯನ್ನು ಬಳಸಿಕೊಂಡಿರುವ ಒಂದು ಕೆಟ್ಟ ವ್ಯಾಪಾರೀ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಇಂಥ ಪ್ರಯತ್ನಗಳನ್ನು ತಡೆಗಟ್ಟುವುದು ಕಷ್ಟ. ಆದರೆ ನಿಯಂತ್ರಿಸಲಿಕ್ಕೆ ಸಾಧ್ಯವಿದೆ. ಪ್ರಸಕ್ತ ಚಿತ್ರದ ಸಂದರ್ಭದಲ್ಲಿ, ವಿಷ್ಣು ಮೇಲಿನ ಅಭಿಮಾನದಿಂದ ಕನ್ನಡ ಚಿತ್ರರಂಗದ ಬಹುತೇಕ ಕಲಾವಿದರು ‘ನಾಗರಹಾವು’ ಬೆಂಬಲಕ್ಕೆ ನಿಂತಿದ್ದರು. ಈ ನಿಟ್ಟಿನಲ್ಲಿ ವಿಷ್ಣು ವರ್ಚಸ್ಸಿನ ಜೊತೆಗೆ ಇತರ ಕಲಾವಿದರ ಅಭಿಮಾನದ ಅಪಬಳಕೆಯೂ ನಡೆದಂತಾಯಿತು. ಪುಟ್ಟಣ್ಣನವರು ಸೃಷ್ಟಿಸಿದ್ದ ‘ನಾಗರಹಾವು’ ರೂಪಕದ ಅಣಕವೂ ಹೊಸ ಚಿತ್ರದ ಮೂಲಕ ನಡೆದಿದೆ.

ವಿಷ್ಣು ಮರುಕಳಿಕೆಯನ್ನು ಬಾಲಿಶವಾಗಿ ಚಿತ್ರಿಸಿರುವುದರಲ್ಲಿ ‘ನಾಗರಹಾವು’ ಮೊದಲೇನೂ ಅಲ್ಲ. ಅಭಿಮಾನದ ಹೆಸರಿನಲ್ಲಿ ಈವರೆಗೆ ನಡೆದಿರುವ ಬಹುತೇಕ ಪ್ರಯತ್ನಗಳೆಲ್ಲ – ‘ಸಾಹಸಸಿಂಹ’ ಎನ್ನುವ ವಿಶೇಷಣದಲ್ಲೂ ಗರ್ಜನೆಯಲ್ಲೂ ಕೊನೆಗೊಂಡಿವೆ. ‘ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ’ಯಂಥ ವಿಶಿಷ್ಟ ಪ್ರಯತ್ನ ಹೊರತುಪಡಿಸಿದರೆ ಹಿರಿಯ ನಟನ ವ್ಯಕ್ತಿತ್ವವನ್ನು ಗೌರವಿಸುವ ರೀತಿಯ ಪ್ರಯತ್ನಗಳು ನಡೆದಿರುವುದು ಕಡಿಮೆ. ವಿಷ್ಣುವರ್ಧನ್‌ರ ಹೆಸರು ಮತ್ತು ಅವರ ಚಿತ್ರಗಳ ಹೆಸರುಗಳನ್ನು ಬಳಸಿಕೊಂಡು ರೂಪುಗೊಳ್ಳುತ್ತಿರುವ ಚಿತ್ರಗಳು ಕೂಡ ಕಳ್ಳಕಾಕರ ಕಥನಗಳೇ ಆಗಿರುವುದನ್ನು ಗಮನಿಸಬೇಕು.

ಪುಟ್ಟಣ್ಣರ ‘ನಾಗರಹಾವು’ ಚಿತ್ರದ ಕುದಿರಕ್ತದ ತರುಣ, ‘ಗಂಧದಗುಡಿ’ಯ ಪ್ರತಿನಾಯಕ, ‘ಬಂಧನ’ದ ಪ್ರೇಮಿ, ‘ಮುತ್ತಿನಹಾರ’ದ ಸಿಪಾಯಿ, ‘ನಿಷ್ಕರ್ಷ’ದ ಕಮಾಂಡೊ, ‘ಲಾಲಿ’ಯ ವಾತ್ಸಲ್ಯಮಯಿ ತಂದೆ – ನಟನೊಬ್ಬ ಸಂಭ್ರಮಿಸಬಹುದಾದ ಪಾತ್ರಗಳಿವು. ಆದರೆ, ಈಗ ನಡೆದಿರುವ ಅಭಿಮಾನದ ಅಮಲಿನಲ್ಲಿ ಈ ಪ್ರಬುದ್ಧ ಮಾದರಿಗಳೆಲ್ಲ ನಾಚಿಕೆಯಿಂದ ಮುಖ ಮರೆಸಿಕೊಂಡಂತಿವೆ.

■ ರಘು